ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

Thursday, 27th March 1980/Chaithra 7, 1902 S.E.

The House met in the Assembly Chamber. Vidhana Soudha, at One of the Clock.

[MR. SPEAKER (SRI P. VENKATARAMANA) in the Chair.]

STARRED QUESTIONS
(to which oral answers were given)

Travellers Bunglow at Mulbagal

75 SRI J. M. REDDY (Mulbagal).—Will the Chief Minister be pleased to state,—

whether estimate for the construction of Travellers Bungalow at Mulbagal has been sanctioned ?

SRI R. GUNDU RAO (Chief Minister).—

No.

ಶ್ರೀ ಜೆ. ಎಂ. ರೆಡ್ಡಿ.—ಕಳೆದ ವರ್ಷವೇ ಪ್ರವಾಸಿ ಮಂದಿರದ ನಕ್ಷೆ ಮತ್ತು ಅಂದಾಜು ಸರ್ಕಾರಕ್ಕೆ ಬಂದಿದ್ದರೂ ಸಹ ಮಂಜೂರಾತಿ ನೀಡಲು ಸರ್ಕಾರ ಏಕೆ ನಿದಾನ ಮಾಡುತ್ತಿದೆ.

ಶ್ರೀ ಆರ್. ಗುಂಡೂರಾವ್.—ಸರ್ಕಾರಕ್ಕೆ ನಕ್ಷೆ ಮತ್ತು ಅಂದಾಜು ಬಂದಿದೆ; ಆದರೆ ಈ ಸಾರಿಯ ಆಯವ್ಯಯದಲ್ಲಿ ಅದನ್ನು ಸೇರಿಸಿಲ್ಲ.

ಶ್ರೀ ಜೆ. ಎಂ. ರೆಡ್ಡಿ.—ಮುಳಬಾಗಿಲು ಒಂದು ತಾಲೂಕು ಕೇಂದ್ರ; ಮತ್ತು ಅಲ್ಲಿ ಪವಿತ್ರವಾದ ದೇವಸ್ಥಾನಗಳಿವೆಯಲ್ಲದೆ ಅದು ತಿರುಪತಿ ಮಂತ್ತು ಮದ್ರಾಸಿಗೆ ಹೋಗುವ ದಾರಿಯಲ್ಲಿದೆ. ಆದರೂ ಕೂಡ ಅಲ್ಲಿ ಒಂದು ಪ್ರವಾಸಿ ಮಂದಿರ ಇಲ್ಲ. ಆದ್ದರಿಂದ, ಮಾನ್ಯ ಮುಖ್ಯ ಮಂತ್ರಿಗಳು ಅದನ್ನು ಈ ವರ್ಷದಲ್ಲೇ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಮುಳಬಾಗಿಲು ಒಳ್ಳೆಯ ಪ್ರವಾಸಿ ಕೇಂದ್ರ ಎಂಬುದರಲ್ಲೇನೂ ಅನುಮಾನವಿಲ್ಲ. ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಕೆಲಸ ಮಾಡಿಕೊಡೋಣ.

Mining Leases Granted in the State

213 SRI MALLUR ANANDA RAO (Rajajinagar).—Will the Chief Minister be pleased to state—

(a) the names and addresses of the Mining Companies or concerns engaged in Mining operations in the State for whom mining leases are granted by the Government ;

(b) of them how many are actively engaged in mining operations, and how many of them are idling ;

(c) action taken by the Department on such idling concerns;

(d) how many companies are owned by the people belonging to Karnataka ?

SRI R. GUNDU RAO (Chief Minister).—

(a) The total mining leases in the State is 758, as at the beginning of 1979. The details giving names and addresses etc., will be tabled separately.

(b) Number actively engaged : 485

Number idle : 273

(c) Statutory notices are issued for determination, if the block is kept idle continuously for than one year without valid grounds. Leases are determined (terminated) if the violations are not remedied within the stipulated time of 60 days from the date of service of notice.

(d) The information is not available since the records are not maintained indicating who are outsiders. The provisions of M.M.R.D. Act (Act No. 67 of 1957) which is a Central Act provides that any Indian National is eligible to apply for a mining lease.

ಶ್ರೀ ಮಳ್ಳೂರು ಆನಂದರಾವ್.—ತಮ್ಮ ಉತ್ತರದಲ್ಲಿ ೧೯೭೯ನೇ ವರ್ಷದ ಪ್ರಾರಂಭದ ತನಕ ಳಲ್ಲಿ ಗಣಿಗಳನ್ನು ಗುತ್ತಿಗೆಗೆ ಕೊಡಲಾಗಿದೆ ಎಂದು ಹೇಳಿದ್ದೀರಿ. ಹಾಗಾದರೆ ೧೯೭೯ರಿಂದ ಈಚೆಗೆ ಎಷ್ಟು ಗಣಿಗಳಿಗೆ ಅರ್ಜಿ ಸಲ್ಲಿಸಿದ್ದಾರೆ, ಎಷ್ಟನ್ನು ಕೊಟ್ಟಿದ್ದೀರಿ ಮತ್ತು ಎಷ್ಟನ್ನು ವಜಾ ಮಾಡಿದ್ದೀರಿ ? ಒಂದು ವೇಳೆ ಕೊಡದಿದ್ದರೆ ಕೊಡದಿರುವುದಕ್ಕೆ ಕಾರಣವೇನು ?

ಶ್ರೀ ಆರ್. ಗುಂಡೂರಾವ್.—ಅದು ಆಡಿಟ್ ಆಗಬೇಕಾಗಿದೆ, ಆಡಿಟ್ ಆದ ಬಳಿಕ ಮಾಹಿತಿ ಒದಗಿಸುತ್ತೇನೆ.

ಶ್ರೀ ಮಳ್ಳೂರು ಆನಂದರಾವ್.—ಆಡಿಟ್ಟಿಗೂ ಇದಕ್ಕೂ ಏನೂ ಸಂಬಂಧವಿಲ್ಲ. ಎಷ್ಟು ಮಂದಿ ಅರ್ಜಿ ಸಲ್ಲಿಸಿದ್ದಾರೆ, ಎಷ್ಟು ಕೊಟ್ಟಿದ್ದೀರಿ, ಎಷ್ಟು ಕೊಟ್ಟಿಲ್ಲ ಅಂದಾಗ ಅದಕ್ಕೂ ಇದಕ್ಕೂ ಏನು ಸಂಬಂಧ ?

ಶ್ರೀ ಆರ್. ಗುಂಡೂರಾವ್.—ಸರಿಯಾಗಿ ಹೇಳುವುದಕ್ಕೆ ಸ್ವಲ್ಪ ಸಮಯಬೇಕು. ಒಂದು ಅಂದಾಜಿನಲ್ಲಿ ಹೇಳುವುದಾದರೆ ೨೫ ಜನರಿಗೆ ಕೊಟ್ಟಿದ್ದೇವೆ.

ಶ್ರೀ ಮಳ್ಳೂರು ಆನಂದರಾವ್. – ನನ್ನ (ಆ) ಪ್ರಶ್ನೆಗೆ ಉತ್ತರವಾಗಿ ೨೭೩ ಕಂಪನಿಗಳು ನಿಷ್ಕ್ರಿಯವಾಗಿವೆ ಎಂದು ಹೇಳಿದ್ದೀರಿ. ಹಾಗಾದರೆ ಅವು ಎಷ್ಟು ವರ್ಷಗಳಿಂದ ಹಾಗೆ ಇವೆ ? ಆ ರೀತಿ ನಿಷ್ಕ್ರಿಯವಾಗಿರತಕ್ಕ ಕಂಪನಿಗಳನ್ನು ಟರ್ಮಿನೇಟ್ ಮಾಡುವುದಕ್ಕೆ ನಿಮ್ಮ ನಿರ್ದೇಶಕರು ನೋಟೀಸ್ ಕೊಟ್ಟಿದ್ದಾರೆಯೇ ? ಕೊಟ್ಟಿದ್ದರೆ ಎಷ್ಟಕ್ಕೆ ಕೊಟ್ಟಿದ್ದಾರೆ ?

ಶ್ರೀ ಆರ್. ಗುಂಡೂರಾವ್.—ಅದಕ್ಕೆ ನೋಟೀಸ್ ಬೇಕು.

ಅಧ್ಯಕ್ಷರು.—ಅಷ್ಟೆಲ್ಲ ಮಾಹಿತಿ ಬೇಕೆಂದರೆ ನೋಟೀಸ್ ಬೇಕಾಗುತ್ತದೆ.

ಶ್ರೀ ಮಳ್ಳೂರು ಆನಂದರಾವ್.—ಅಷ್ಟರಲ್ಲಿ ನನ್ನ ಪ್ರಶ್ನೆಯ ಉದ್ದೇಶವೇ ಹೊರಟು ಹೋಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಫೈಲ್ ಸಮೇತ ರೆಡಿಯಾಗಿ ಬಂದಿರುತ್ತಾರೆಂದು ನಾನು ತಿಳಿದಿದ್ದೆ. ಕಾನೂನು ಪ್ರಕಾರ ನಿರ್ದೇಶಕರು ಎಷ್ಟು ಕಂಪನಿಗಳಿಗೆ ಟರ್ಮಿನೇಷನ್ ನೋಟೀಸ್ ಕೊಟ್ಟಿದ್ದಾರೆ.

ಶ್ರೀ ಆರ್. ಗುಂಡೂರಾವ್.—೨೫ಕ್ಕೆ ನೋಟೀಸ್ ಕೊಟ್ಟಿದ್ದಾರೆ.

ಶ್ರೀ ಮಳ್ಳೂರು ಆನಂದರಾವ್.—ಹಾಗಾದರೆ ನೋಟೀಸ್ ಕೊಟ್ಟು ಎಷ್ಟು ದಿವಸವಾಯಿತು ? ನೋಟೀಸ್ ಕೊಟ್ಟಮೇಲೆ ಕಾನೂನು ಪ್ರಕಾರ ಪುನಃ ನೋಟಿಫೈ ಮಾಡಬೇಕು. (ಆಗ ಯಾರು ಬೇಕಾದರೂ ಅರ್ಜಿ ಸಲ್ಲಿಸಬಹುದು) ಆ ಪ್ರಕಾರ ನೋಟಿಫೈ ಮಾಡಿದ್ದಾರೆಯೇ ?

ಶ್ರೀ ಆರ್. ಗುಂಡೂರಾವ್.—ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಯೇ ಬೇರೆ ಮತ್ತು ಕೇಳುತ್ತಿರುವ ಉಪ ಪ್ರಶ್ನೆಗಳೇ ಬೇರೆ. ಅವರು ಕೇಳಿರುವ ಪ್ರಶ್ನೆಗೆ ಉತ್ತರ ಕೊಡಲಾಗಿದೆ. ಉಪಪ್ರಶ್ನೆಗೆ ಸಹ ಉತ್ತರವಾಗಿ ೨೫ಕ್ಕೆ ನೋಟೀಸ್ ಕೊಡಲಾಗಿದೆ ಎಂದು ಹೇಳಿದ್ದೇನೆ. ಆದರ ಮೇಲೆ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಕೈಗೊಳ್ಳುತ್ತೇವೆ.

ಶ್ರೀ ಮಳ್ಳೂರು ಆನಂದರಾವ್.—ನಾನು ಅಂಕಿಅಂಶಗಳ ಬಗ್ಗೆ ಹೋಗುವುದಿಲ್ಲ. ಏಕೆಂದರೆ ಇಲಾಖೆಯವರು ಅದನ್ನು ಒದಗಿಸುವುದೂ ಕೂಡ ಸತ್ಯಕ್ಕೆ ದೂರವಾದ ಸಂಗತಿ. ನೂರಾರು ಪ್ರಶ್ನೆಗಳಿಗೆ ಮಾನ್ಯ ಗುಂಡೂರಾಯರು ಉತ್ತರಿಸಬೇಕಾಗಿದೆ. ನಿಮ್ಮ ನಿರ್ದೇಶಕರು ನಿಷ್ಕ್ರಿಯವಾಗಿರತಕ್ಕ ಗಣಿ ಗುತ್ತಿಗೆಗಳ ಬಗ್ಗೆ ಪುನ: ನೋಟಿಫೈ ಮಾಡಿದ್ದಾರೆಯೇ ?

ಶ್ರೀ ಆರ್. ಗುಂಡೂರಾವ್.—ಆ ರೀತಿ ಆಗಿರುವ ೨೫ಕ್ಕೆ ಪುನಃ ನೋಟಿಫೈ ಮಾಡಿದ್ದಾರೆ.

ಶ್ರೀ ಮಳ್ಳೂರು ಆನಂದರಾವ್.—ಯಾವಾಗ ನೋಟಿಫೈ ಮಾಡಿದ್ದಾರೆ ? ನನಗೆ ಗೊತ್ತಿರುವ ಮಾಹಿತಿ ಪ್ರಕಾರ ಮತ್ತು ನಿಮ್ಮ ಕಾನೂನು ಪ್ರಕಾರ ನಿರ್ದೇಶಕರು ಟರ್ಮಿನೇಟ್ ಮಾಡಿದ ಒಂದು ವರ್ಷದೊಳಗೆ ನೋಟಿಫೈ ಮಾಡಬೇಕು ಮತ್ತು ನೋಟಿಫೈ ಮಾಡಿದ ನಂತರ ಅರ್ಜಿ ಸಲ್ಲಿಸಿದವರಿಗೆ ಪುನಃ ಮಂಜೂರು ಮಾಡಬೇಕೆಂದು ಇದೆ. ಆದರೆ ಡೈರೆಕ್ಟರ್‌ರವರ ಕಛೇರಿಯಲ್ಲಿ ಅವರಿಗೆ ಬೇಕಾಗುವ ಗಿರಾಕಿ ಬರುವತನಕ ನೋಟಿಫೈ ಮಾಡದೆ ಒಳ್ಳೆಯ ಬೆಲೆ ಬಾಳತಕ್ಕಂತಹ ಗಣಿಗಳನ್ನು ಹಾಗೆ ಇಟ್ಟುಕೊಂಡಿರುತ್ತಾರೆ. ದಕ್ಷಿಣೆ ಕೊಟ್ಟಮೇಲೆ ಮಾಡುತ್ತಾರೆ. ಅದಕ್ಕೋಸ್ಕರವೇ ನಾನು ಅಂಕಿಅಂಶಗಳನ್ನು ಕೇಳಿರುವುದು. ಗಣಿಗಳನ್ನು ಗುತ್ತಿಗೆ ಕೊಡುವ ವಿಚಾರದಲ್ಲಿ ಗಣಿ ಮತ್ತು ಭೂಗರ್ಭ ಇಲಾಖೆಯಲ್ಲಿ ವ್ಯಾಪಕವಾದ ಭ್ರಷ್ಟಾಚಾರ ತಲೆಯಿಂದ ಕಾಲು ತನಕ ಇವೆ. ಇದನ್ನು ದೂರ ಮಾಡುವುದಕ್ಕೆ ನಿಮ್ಮ ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಯಾರು ಅರ್ಜಿಯನ್ನು ಸಲ್ಲಿಸಿರುತ್ತಾರೋ ಅವರಿಗೆ ಕಾನೂನು ಪ್ರಕಾರ ಕೊಡುವುದಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ ?

† ಶ್ರೀ ಆರ್. ಗುಂಡೂರಾವ್.—ಎಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬುದನ್ನು ನಮ್ಮ ಗಮನಕ್ಕೆ ತಂದರೆ ಖಂಡಿತ ಕ್ರಮ ತೆಗೆದುಕೊಳ್ಳುತ್ತೇನೆ. ಅನ್ಯಾಯವನ್ನು ಸರಿಪಡಿಸುತ್ತೇನೆ.

ಶ್ರೀ ಮಳ್ಳೂರು ಆನಂದರಾವ್.—ನನ್ನ ಹತ್ತಿರ ಬೇಕಾದಷ್ಟು ಮಾಹಿತಿ ಇದೆ. The details giving the names and addresses etc., will be tabled separately. ಅದನ್ನು ಸಭೆಯ ಮುಂದೆ ಇಟ್ಟಿಲ್ಲ. ನಾನು ಪ್ರಶ್ನೆ ಕೇಳಿರುವ ಉದ್ದೇಶವೇ ಅದನ್ನು ತಿಳಿದುಕೊಳ್ಳಲು. ನಮ್ಮ ಮುಂದೆ ಪಟ್ಟಿಯನ್ನೇ ಇಟ್ಟಿಲ್ಲ, ಆದರೂ ನಾನು ಆ ಬಗ್ಗೆ ಹೆಚ್ಚು ಒತ್ತಾಯ ಮಾಡುವುದಿಲ್ಲ, ಬೇರೆ ಚರ್ಚೆ ಮೇಲೆ ಮಾತನಾಡುವಾಗ ಆ ಬಗ್ಗೆ ಹೇಳುತ್ತೇನೆ.

ಅಧ್ಯಕ್ಷರು.—ನೀವು ಜನರಲ್ಲಾಗಿ ಕೇಳಿದರೆ ಆಗುವುದಿಲ್ಲ. ನಿರ್ದಿಷ್ಟವಾಗಿ ನಿಮಗೆ ಬೇಕಾದ ಮಾಹಿತಿಯನ್ನು ಕೇಳಿ.

ಶ್ರೀ ಮಳ್ಳೂರು ಆನಂದರಾವ್.—ತಾವು ಗಣಿ ಗುತ್ತಿಗೆಗೆ ಕೊಟ್ಟಿರುವವರಲ್ಲಿ ಕನ್ನಡಿಗರು ಎಷ್ಟು ಜನರಿದ್ದಾರೆ ಎಂದು ನಾನು ಪ್ರಶ್ನೆ ಕೇಳಿದ್ದರೆ ತಾವು, ಭಾರತದ ಯಾವ ಪ್ರಜೆಯಾದರೂ ಗಣಿ ಗುತ್ತಿಗೆಯನ್ನು ಪಡೆಯುವುದಕ್ಕೆ ಅರ್ಜಿ ಸಲ್ಲಿಸಲು ಅರ್ಹನೆಂಬುದಾಗಿ ಕೇಂದ್ರ ಶಾಸನದಲ್ಲಿ ಅವಕಾಶವನ್ನು

† Indicates that remarks or speeches have not been revised by the member concerned.

ಕಲ್ಪಿಸಲಾಗಿದೆ ಎಂದು ಹೇಳಿದ್ದೀರಿ, ಗಣಿ ಗುತ್ತಿಗೆಯನ್ನು ಯಾರು ತೆಗೆದುಕೊಂಡಿದ್ದಾರೋ ಅದರಲ್ಲಿ ೯೦ ಭಾಗದ ಜನ ಕರ್ನಾಟಕದವರಲ್ಲ. ಬೇರೆಯವರು ಗಣಿ ಗುತ್ತಿಗೆ ತೆಗೆದುಕೊಂಡು ಕರ್ನಾಟಕದ ಸಂಪತ್ತನ್ನು ಕೊಳ್ಳೆ ಹೊಡೆಯುತ್ತಿದ್ದಾರೆ. ಆದ್ದರಿಂದಲೇ ನಾನು ಕನ್ನಡಿಗರು ಎಷ್ಟು ಜನರು ಗುತ್ತಿಗೆಗೆ ತೆಗೆದುಕೊಂಡಿದ್ದಾರೆ ಎಂದು ಪ್ರಶ್ನೆ ಕೇಳಿದ್ದೇನೆ. ಇದನ್ನು ಪುನರ್ ಪರಿಶೀಲನೆ ಮಾಡಿ ಕನ್ನಡಿಗರಿಗೆ ಗಣಿ ಗುತ್ತಿಗೆಯನ್ನು ನೀಡಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ. ಅಧಿಕಾರಿಗಳಿಗೆ ಹೇಳಿದರೆ ಅವರು ಕೊಡುವುದಿಲ್ಲ. ಆದ್ದರಿಂದ ತಾವು ಕನ್ನಡಿಗರಿಗೇ ಆಧ್ಯತೆಯನ್ನು ನೀಡುವುದರ ಬಗ್ಗೆ ಕಾನೂನಿನ ಚೌಕಟ್ಟಿನಲ್ಲೇ ಅವಕಾಶ ಮಾಡಿಕೊಡುತ್ತೀರಾ ಮತ್ತು ಈಗ ಕೊಟ್ಟಿರುವ ಇಡೀ ಗುತ್ತಿಗೆಯನ್ನು ಪುನರ್ ಪರಿಶೀಲನೆ ಮಾಡಿ ಕನ್ನಡಿಗರಿಗೆ ಆಧ್ಯತೆ ಕೊಡಬೇಕು ಎಂಬ ಆದೇಶವನ್ನು ಕೊಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಪರಿಶೀಲನೆ ಮಾಡುತ್ತೇನೆ.

ಶ್ರೀ ಹೆಚ್. ಗಂಗಾಧರನ್.—ಸ್ವಾಮಿ, ಪ್ರಿಲಿಮಿನರಿ ಲೀಸ್‌ಗೆ ಲೈಸೆನ್ಸ್ ತೆಗೆದುಕೊಂಡು ಲಕ್ಷಾಂತರ ರೂಪಾಯಿ ಮಿನರಲ್ಸ್ ಹೊಡೆಯುತ್ತಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ಜಕ್ಕನಕೋಟೆಯಲ್ಲಿ ಪ್ರಿಲಿಮಿನರಿ ಲೀಸ್ ತೆಗೆದುಕೊಂಡು ಲಕ್ಷಾಂತರ ರೂಪಾಯಿ ಬೆಲೆ ಬಾಳುವಂಥ ಸಂಪತ್ತನ್ನು ಲೂಟಿ ಹೊಡೆಯುತ್ತಿದ್ದಾರೆ. ಈ ಬಗ್ಗೆ ನಾನು ಪತ್ರವನ್ನೂ ಬರೆದಿದ್ದೇನೆ. ಇದರಲ್ಲಿ ಇಲಾಖೆಯವರು ಮತ್ತು ಪೋಲೀಸಿನವರು ಶಾಮೀಲಾಗಿದ್ದಾರೆ. ಇದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ಗುಂಡೂರಾವ್.—ನನ್ನ ಗಮನಕ್ಕೆ ಅಂಥ ಪ್ರಕರಣಗಳು ನಡೆದಿರುವುದನ್ನು ತಂದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

Taking over the maintenance of water supply of Chamarajanagar Town.

255. SRI M. C. BASAPPA (Chamarajanagar) —Will the Minister for Housing and Urban Development be pleased to state.—

(a) whether their is any proposal before Karnataka Urban Water Supply and Drainage Board to take over the maintenance of water supply of Chamarajanagar Town ;

(b) if so, when they propose to take over ;

(c) whether an improvement estimate is prepared and pending before the Government for sanction to improve water supply to Chamarajanagar Town?

SRI DHARM SINGH (Minister for Housing and Urban Development).—

(a) Yes.

(b) The Board will take over maintenance provided the T.M.C. deposits maintenance charges of Rs. 5 lakhs as intimated by the Board in letter No. 12779, dated 30-3-1979. So far TMC authorities have not deposited the maintenance charges.

(c) The Karnataka Urban Water Supply and Drainage Board have prepared estimate for improving the water supply amounting to Rs. 50.00 lakhs, under LIC Loan assistance scheme. It is under the active consideration of the Government for according administrative approval.